# ಅಧ್ಯಾಯ - 1

# ಯೇಸು ವಿನೊಡನೆ ಇರುವವರ ಕಲಸ

## ಯೇಸು ಯಾರು ?

ಯೇಸು ಅಂದರೆ ಆತನು ಯಾರೋ ಎಂದು ಕೇಳಿದ ಮಾತು ನಿಜವಾದರೆ.

- ಯೇಸು ವಿನಂತಹ ದೊಡ್ಡ ಪ್ರಸಿದ್ಧವಾದ ಮನುಷ್ಯ ಈ ಲೋಕದಲ್ಲಿ ಜೀವಿಸಲಿಲ್ಲ.

- ಯೇಸು ದೇವರ ಮಗನು, ಸೃಷ್ಟಿಕರ್ತನು ಮತ್ತು ಈ ಲೋಕವನ್ನು ಆಳುವವನಾಗಿದ್ದಾನೆ. ಆ ಲೋಕದ ಎಲ್ಲಾ ಮನುಷ್ಯರಿಗಾಗಿ ಅವರನ್ನು ಅವರ ಪಾಪಗಳಿಂದ ಬಿಡುಗಡೆ ಮಾಡಲು ಬಂದನು. ಈ ಸತ್ಯವನ್ನೇ ನಮಗೆ ತಿಳಿಸುವ ಮೂಲಕ ತಾನೇ ದೇವರೆಂದು ಮನವರಿಕೆಯಾಗಿದೆ

- ಒಂದುವೇಳೆ ಯೇಸು ತಾನು ಯಾರೆಂದು ತಿಳಿಸದೇ ಇದ್ದರೆ, ಅವನು ಹುಚ್ಚನಾಗಿ ಅಥವಾ ಬುದ್ಧಿ ಇಲ್ಲದ ಮನುಷ್ಯನಾಗಿ ಇರುತ್ತಿದ್ದನು. ಹಾಗೆ ಆದರೆ, ಒಂದು ಸುಳ್ಳಿನಿಂದ ಲೋಕದಲ್ಲಿ ಕೊಟ್ಯಾದಿ ಜನರು ಈ ಚರಿತ್ರೆಯನ್ನು ನಂಬುತ್ತಿರಲ್ಲಿಲ್ಲ. ಆದರೆ ಯೇಸು ಕ್ರಿಸ್ತನು ಇತಿಹಾಸವನ್ನೇ ಬದಲಾಯಿದನವನಾಗಿದ್ದಾನೆ. ದೇವರಿಗೆ ಸ್ತೊತ್ರವಾಗಲಿ ! ಲೋಕದಲ್ಲಿ ಈ ದಿನದಲ್ಲಿ ಯೇಸು ಕ್ರಿಸ್ತನನ್ನು ಮೂರನೆ ಒಂದು ಬಾಗದಷ್ಟು ಜನರು ನಂಬಿದ್ದಾರೆ. ಯೇಸುಕ್ರಿಸ್ತನನ್ನು ಆರಾಧಿಸುತ್ತಿದ್ದಾರೆ. ಯೇಸುಕ್ರಿಸ್ತನ ಆತ್ಮದ ಮೂಲಕವಾಗಿ ಜನರು, ಪ್ರಜೆಗಳು ಅವರ ಆಶೀರ್ವಾದಗಳನ್ನು ಹೊಂದಿದ್ದಾರೆ. ಯೇಸುಕ್ರಿಸ್ತನು ಒಂದುವೇಳೆ ಸುಳ್ಳುಗಾರನು ಹುಚ್ಚನು ಆಗಿದ್ದರೆ, ಇಷ್ಟೊಂದು ಶಕ್ತಿ ಮಹಿಮ, ರಕ್ಷಣೆ ಮತ್ತು ಅದ್ಭುತಗಳು ಲೋಕದಲ್ಲಿ ನಡೆಯುತ್ತಿರಲಿಲ್ಲ.

- ಆದರೆ ಯೇಸುಕ್ರಿಸ್ತನು ಹೇಳಿದ ಪ್ರಕಾರ ಸತ್ತು, ಸಮಾದಿಯಲ್ಲಿ ಇಡಲ್ಪಟ್ಟು

ಮೂರನೆಯ ದಿನದಲ್ಲಿ ಮರಣವನ್ನು ಜಯಿಸದಿದ್ದರೆ, ನಾವು ಯೇಸುಕ್ರಿಸ್ತನನ್ನು ಕುರಿತು ಅವನ ಮಹಿಮೆಯನ್ನು ತಿಳಿಯದೇ ಇರುತ್ತಿದ್ದೆವು.

- ಆದರೆ ಯೇಸುಕ್ರಿಸ್ತನು ತಾನು ಹೇಳಿದ ಪ್ರಕಾರ ಸತ್ತು, ಮತ್ತೆ ಬದುಕೆ ತಂದೆಯ ಬಲಗಡೆಯಲ್ಲಿ ಕುಳಿತಿದ್ದಾರೆಂದು ನಾವು ನಂಬದೇ ಇದ್ದರೆ ನಿಜವಾಗಿಲು ಅಪಾಯದ ದಿನಗಳಲ್ಲಿ ಜೀವಿಸುತ್ತಿದ್ದೇವೆ.

ಒಂದು ವೇಳೆ ನಿನ್ನ ಜೀವನದಲ್ಲಿ ಯಾವುದಾದರು ಒಂದು ಬೆಲೆಯುಳ್ಳ ವಸ್ತುವನ್ನು ನೀನು ಕಳೆದುಕೊಂಡಿದ್ದೀಯಾ? ನಿನ್ನ ಅನೇಕ ಪಾಪಗಳನ್ನು ಕ್ಷಮಿಸಿ ನಿನ್ನನ್ನು ಅವನೊಡನೆ ಒಬ್ಬನಾಗಿ ಯೇಸುಕ್ರಿಸ್ತನು ನಿನ್ನು ಬದಲಾಯಿಸಿದ್ದಾನೊ?

## ಯೇಸು ನಮಗಾಗಿ ಏನು ಮಾಡಿದ್ದಾರೆ ?

ಅವನು ಈ ಲೋಕಕ್ಕೆ ಬಂದ ಉದ್ದೇಶವೇನೆಂದರೆ,

### 1. ನಮ್ಮನ್ನು ತೀರ್ಪಿನಿಂದ ಬಿಡುಗಡೆಮಾಡಲು :

''ಒಂದೇಸಾರಿ ಸಾಯುವುದು ಆಮೇಲೆ ನ್ಯಾಯ ತೀರ್ಪು ಮನುಷ್ಯರಿಗೆ ಹೇಗೆ ನೇಮಕವಾಗಿದೆಯೋ ಹಾಗೆಯೇ ಕ್ರಿಸ್ತನು ಸಹ ಬಹುಜನರ ಪಾಪಗಳನ್ನು ಹೊತ್ತು ಕೊಳ್ಳುವದಕ್ಕೋಸ್ಕರ ಒಂದೇ ಸಾರಿ ಸಮರ್ಪಕನಾದನು'' ಇಬ್ರಿಯರಿಗೆ 9 : 27

ಮನುಷ್ಯರಿಗೆ ಮರಣ ಹೊಂದುವುದೇ ದೊಡ್ಡ ಅಪಾಯವಲ್ಲ ಆತ್ಮದ ಮರಣವು ಬಹು ಭಯಂಕರವಾದದ್ದು ಅಂದರೆ ಶಾಶ್ವತವಾಗಿ ದೇವರ ಪ್ರೀತಿಯಿಂದ ಬೇರೆ ಆಗಿ ಹೋಗುವುದೇ. ನಮ್ಮ ಪಾಪಗಳಿಗೆ ಮರಣವೇ ತೀರ್ಪು. ಯೇಸುಕ್ರಿಸ್ತನು ನಮ್ಮ ಪಾಪಗಳನ್ನು ಹೊತ್ತು ಅವನ ಮೇಲೆ ಆ ತೀರ್ಪನ್ನು ಹಾಕಿಕೊಂಡನು. ಆದುದರಿಂದ ನೀನು ರಕ್ಷಣೆ ಹೊಂದಿದರೆ, ತೀರ್ಪನ್ನು ಕುರಿತು ಭಯಪಡಬೇಡ.

### 2. ದೇವರ ಪ್ರೀತಿಯನ್ನು ನಮ್ಮಲ್ಲಿ ತೋರಿಸಲು

''ನಾವು ದೇವರನ್ನು ಪ್ರತಿಸಿದ್ದರಲ್ಲಿಲ್ಲ ಆತನು ನಮ್ಮನ್ನು ಪ್ರೀತಿಸಿ ನಮ್ಮ

ಪಾಪ ನಿವಾರಣಾರ್ಥವಾಗಿ ತನ್ನ ಮಗನನ್ನು ಕಳುಹಿಸಿಕೊಟ್ಟದರಲ್ಲಿಯೇ ಪ್ರೀತಿಯ ನಿಜಗುಣವು ತೋರಿ ಬರುತ್ತಿದೆ. 1 ಯೋಹಾನ 4 : 10

ಮಾನವನು ಯಾವುದೇ ರೀತಿಯಲ್ಲಿ ತೋರಿಸಲಾರದ ಬಹು ಶ್ರೇಷ್ಟವಾದ ಪ್ರೀತಿಯನ್ನು ದೇವರು ನಮಗೆ ತೋರಿಸಿದ್ದಾರೆ. ಅದು ಕೇವಲ ಸ್ನೇಹವೇ ಅಲ್ಲ, ಬಹು ಗೌರವದಿಂದ ಕೂಡಿದ ಪ್ರೀತಿಯ ಸಂಬಂಧವೇ ಆಗಿದೆ. ಅದು ಇಬ್ಬರು ಮನುಷ್ಯರಲ್ಲಿಯ ಪ್ರೀತಿ ಅಲ್ಲ ಅದು 'ಅಗಾಪೆ' ಪ್ರೀತಿ. ಅಂದರೆ ದೇವರು ತನ್ನನ್ನು ತಾನೇ ಪೂರ್ಣವಾಗಿ ತಾನು ಸೃಷ್ಟಿಸಿದ ಸೃಷ್ಟಿಕೊರಕು ಅರ್ಪಿಸಿದ ಪ್ರೀತಿ ಆಗಿದೆ.

## 3. ಕ್ಷಮಾಪಣೆಯನ್ನು ಹೊಂದಲು

''ಈತನು ನಮಗೋಸ್ಕರ ತನ ರಕ್ತವನ್ನು ಸುರಿಸಿದ್ದರಿಂದ ನಮ್ಮ ಅಪರಾದಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು. ಇದು ದೇವರ ಕೃಪಾತಿಶಯವೇ'' ಎಫೆಸ 1 : 7

ಅಪರಾದವು ಈ ಲೋಕದಲ್ಲಿ ವಿಸ್ತರಿಸಿದೆ. ಕೆಲವು ಸಾರಿ ಆ ಅಪರಾಧವು ಏನೆಂದು ನಮಗೆ ಗೊತ್ತಿಲ್ಲ. ಆದರೆ ಅರ್ಥ ಮಾಡಿಕೊಳ್ಳುವುದಿಲ್ಲ. ನಿಜವಾದ ಸತ್ಯವೇನಂದರೆ ದೇವರು ಯೇಸುಕ್ರಿಸ್ತನ ಮೂಲಕ ನಮ್ಮ ಅಪರಾಧಗಳನ್ನು ತನ್ನ ಮೇಲೆ ಹಾಕಿ ಕೊಂಡದ್ದರಿಂದ ನಾವು ದೇವರಿಗೆ ದೂರವಾಗಿ ಇರದೆ ಅಪರಾದದಿಂದ ಬಿಡುಗಡೆ ಹೊಂದಿ ದೇವರಿಗೆ ಹತ್ತಿರವಾಗಿದ್ದೇವೆ. ಇದು ಕೇವಲ ನೀನು ಯೇಸು ಕ್ರಿಸ್ತನನ್ನು ಹೃದಯದಿಂದ ನಂಬುವುದರ ಮೂಲಕ ಯೇಸುಕ್ರಿಸ್ತನು ಸುರಿಸಿದ ಪರಿಶುದ್ಧವಾದ ರಕ್ತವು ನಿನ್ನ ಪಾಪವನ್ನು ತೊಳೆದು ನಿನ್ನನ್ನು ಶುದ್ಧಿ ಮಾಡುತ್ತದೆ.

## 4. ನಮ್ಮನ್ನು ದೇವರ ಬಳಿಗೆ ಕರೆದುಕೊಂಡುಹೋಗಲು.

''ಕ್ರಿಸ್ತನು ಸಹ ನೀತಿವಂತನಾಗಿದ್ದು ಅನೀತಿ ವಂತರಿಗೊಸ್ಕರ ಪ್ರಾಣಕೊಟ್ಟು ನಮ್ಮನ್ನು ದೇವರ ಬಳಿಗೆ ಸೇರಿಸುವುದಕ್ಕಾಗಿ ಒಂದೇ ಸಾರಿ ಪಾಪ ನಿವಾರಣೆಕ್ಕೋಸ್ಕರ ಬಾಧೆಪಟ್ಟುಸತ್ತನು''

1 ಪ್ರೇತನು 3 : 18

ಮನುಷ್ಯನು ತನ್ನ ಸ್ವಂತ ಮನೆಯಲ್ಲಿ ನಾಶವಾದನು. ಆತನನ್ನು ಸೃಷ್ಟಿಸಿದ

ದೇವರಿಂದ ತನ್ನ ವಿರೋಧವನ್ನು ತೋರಿಸಿದ್ದರಿಂದ ದೇವರಿಗೆ ದೂರವಾಗಿ ಹೋದನು. ಆತನು ತನ್ನ ಮನೆಯನ್ನು ಮರೆತು ಹೋದನು. ಯೇಸುಕ್ರಿಸ್ತನು ಸಾಯುವುದರ ಮೂಲಕ ಮನುಷ್ಯನು ದೇವರ ಮಾರ್ಗದಲ್ಲಿ ಮತ್ತೆ ಬರುವ ಹಾಗೆ ಆಯಿತು.

## 5. ದೇವರ ಸ್ವಸ್ತ ಮಾಡುವೆಂತಹ ಪೂರ್ಣವಾದ ಶಕ್ತಿಯನ್ನು ಹೊಂದಲು 1 ಪ್ರೇತನು 2 : 24

ನಾವು ಪಾಪದ ಪಾಲಿಗೆ ಸತ್ತು ನೀತಿವಂತರಾಗಿ ಜೀವಿಸುವಂತೆ ಆತನು ನಮ್ಮ ಪಾಪಗಳನ್ನು ತನ್ನ ದೇಹದಲ್ಲಿ ಹೊತ್ತುಕೊಂಡನು. ಮನುಷ್ಯರಿಗೆ ರೋಗವನ್ನು, ಪಾಪದಿಂದ ಜೀವಿಸಬೇಕೆಂದು ದೇವರ ಉದ್ದೇಶವಲ್ಲ. ಅದು ಆತನ ಭವಿಷ್ಯದ ಪ್ರಣಾಳಿಕೆಯಲ್ಲಿಯೂ ಇಲ್ಲ. (ಪ್ರಕಟಣೆಯ ಗ್ರಂಥ 21:4 ಓದಿರಿ) ಈ ದಿನಗಳಲ್ಲಿ ನೀನು ದೇವರು ಅನೇಕರಿಗೆ ಬಿಡುಗಡೆ ಮಾಡುತ್ತಿರುವ ಆತನ ಸ್ವಸ್ಥ ಮಾಡುವ ಶಕ್ತಿಯನ್ನು ನೋಡುತ್ತಿರುವೆ. ಶಿಲುಬೆಯಲ್ಲಿ ಯೇಸುಕ್ರಿಸ್ತನು ತನ್ನ ಅಮೂಲ್ಯವಾದ ರಕ್ತವನ್ನು ಸುರಿಸಿ ಮನುಷ್ಯರ ಪಾಪಗಳೆಂಬ ರೋಗವನ್ನು ಬಿಡುಗಡೆಮಾಡಿ ನಡಿಸಿದ್ದಾನೆ.

## 6. ದುಷ್ಟ ಆತ್ಮಶಕ್ತಿಗಳಿಂದ ಜಯಹೊಂದುವುದು (ಕೊಲಸ್ಸೆ 2 : 14)

''ಆತನು ದೊರೆಗಳನ್ನು ಅಧಿಕಾರಗಳನ್ನು ನಿರಾಯುಧರನ್ನಾಗಿ ಮಾಡಿ ಜಯೋತ್ಸವ ಮಾಡುತ್ತಾನೋ ಎಂಬಂತೆ ಶಿಲುಬೆಯ ಮೇಲೆ ಅವುಗಳನ್ನು ಜಯಿಸಲ್ಪಟ್ಟವನಾಗಿ ಮೆಕೆಸುತ್ತಾ ತೋರಿಸಿದನು''.

ಈ ಲೋಕದ ಕತ್ತಲೆಯ ಶಕ್ತಿಗಳು ಮನುಷ್ಯರನ್ನು ದುಖಿಕ್ಕೆ ಒಳಮಾಡಿದೆ. ಸೈತಾನನು ಈ ಲೋಕದ ಕತ್ತಲೆಯ ಶಕ್ತಿಗಳಿಗೆ ರಾಜನಾಗಿದ್ದಾನೆ. ಪ್ರಜೆಗಳನ್ನು ಕುರುಡರನ್ನಾಗಿ ಮಾಡಿ ದೇವರಿಂದ ಅವರನ್ನು ದೂರ ಮಾಡಿದ್ದಾನೆ. ಆದರೆ ಯೇಸುಕ್ರಿಸ್ತನು ಶಿಲುಬೆಯಲ್ಲಿ ಮರಣವನ್ನು ಹೊಂದಿ ಮತ್ತೆ ಜೀವದಿಂದ ಎದ್ದು ಬರುವ ಮೂಲಕ ಈ ಕತ್ತಲೆಯ ಶಕ್ತಿಗಳನ್ನು ಎದುರಿಸಿ ಜಯಿಸಿ ವಿಜಯವನ್ನು ನಂಬಿದವರಿಗೆ ಕೊಟ್ಟಿದ್ದಾರೆ.

## 7. ನಮ್ಮನ್ನು ಮರಣದಿಂದ ಬಿಡಿಸಲು

ಅದೇ ಪ್ರಕಾರ ಮರಣದ ಅಧಿಕಾರಿಯಾದ ಸೈತಾನನನ್ನು ಮರಣದ ಮೂಲಕವಾಗಿ ಸೋಲಿಸಲು ಜೀವನ ಕಾಲವೆಲ್ಲಾ ತನ್ನ ಮರಣದಿಂದ ದಾಸ್ಯತ್ಯಕ್ಕೆ ಬಳಗಾದವರನ್ನು ಬಿಡುಗಡೆ ಮಾಡಲು ಯೇಸುಕ್ರಿಸ್ತನು ರಕ್ತಮಾಂಸದಲ್ಲಿ ಪಾಲುಹೊಂದಿದನು.

ಮರಣವು ಬಹು ಭಯಂಕರವಾದದ್ದು ಅದಕ್ಕೆ ಅಂತ್ಯವು ಇದೆ ಎಂಬುದಾಗಿ ಮೇಧಾವಿಯಾದ ಅರಿಸ್ಟಾಟಲ್ ಹೇಳಿದ್ದಾನೆ. ಆದರೆ ನಿಜವಾದ ಕ್ರೈಸ್ತವನು ಯೇಸು ಕ್ರಿಸ್ತವನ್ನು ನಂಬಿದ್ದಾನೆ ಯಾಕೆಂದರೆ ಅವನು ಮರಣವನ್ನು ಜಯಿಸಿದ್ದಾನೆ.

## 8. ನಮಗೆ ಪುನರುತ್ಥಾನದ ಶಕ್ತಿಯನ್ನು ಕೊಡಲು.

> ''ಹೇಗೆಂದರೆ ನಾವು ಆತನ ಮರಣಕ್ಕೆ ಸಾದೃಶ್ಯವಾದ ಮರಣವನ್ನು ಹೊಂದಿ ಆತನಲ್ಲಿ ಐಕ್ಯವಾಗಿದ್ದರೆ ಆತನ ಪುನರುತ್ಥಾನಕ್ಕೆ ಸದೃಶವಾದ ಪುನರುತ್ಥಾನವನ್ನು ಹೊಂದಿ ಆತನಲ್ಲಿ ಐಕ್ಯವಾಗುವೆವು''
>
> ರೋಮಾ 6 : 5

ಇದರ ಅರ್ಥವೇನೆಂದರೆ, ನಾವು ಸತ್ತುಹೊದ ಮೇಲೆ ದೇವರ ಪುನರುತ್ಥಾನದ ಶಕ್ತಿಯನ್ನು ರುಚಿ ನೋಡಬೇಕೆಂದು ಹೇಳುವ ಅವಸರವಿಲ್ಲ. ಈಗಲೇ ಅದನ್ನು ನಾವು ತಿಳಿದುಕೊಳ್ಳಬೇಕು. ದೇವರ ಶಕ್ತಿಯ ಬಲದ ಮುಂದೆ ನಮಗೆ ಕೆಲವು ಬಲಹೇನತೆಗಳು ಇವೆ. ಪ್ರತಿ ದಿನವೂ ನಮಗೆ ನಾವೇ ನಿಲ್ಲಲಾರೆವು, ಕೆಲಸವನ್ನು ಮಾಡಿಕೊಳ್ಳಲಾರೆವು. ಆದರೆ ದೇವರು ತನ್ನ ಮಗನ ಮೂಲಕವಾಗಿ ಕೊಟ್ಟಿರುವ ಯೇಸುವಿನ ಶಕ್ತಿಯನ್ನು ನಾವು ಧರಿಸಬಹುದು. ಎಪೆಸದವರಿಗೆ 1 : 18- 23.

## ಪ್ರಾರ್ಥನೆ :

ಸರ್ವಶಕ್ತನಾದ ದೇವರೆ, ಯೇಸುಕ್ರಿಸ್ತನು ನನಗಾಗಿ ಎಲ್ಲವನ್ನು ಮಾಡಿ ಮುಗಿಸಿದ್ದಾನೆ. ಯೇಸುಕ್ರಿಸ್ತನು ದೇವರ ನಿಜಕುಮಾರನು, ನನ್ನ ರಕ್ಷಕನೂ ಆಗಿದ್ದಾನೆಂದು ನನ್ನ ಪೂರ್ಣಹೃದಯದಿಂದ ನಂಬಿದ್ದೇನೆ. ನಾನು ನಂಬಿದ ಪ್ರಾಕಾರವೇ ನನ್ನ ಆತ್ಮೀಯ ಕಣ್ಣನ್ನು ತೆರೆಸಿ, ಯೇಸುವೇ ನಿನ್ನ ಸತ್ಯ ಮಾರ್ಗದಲ್ಲಿ ನಡೆಯಲು ಸಹಾಯ ಮಾಡುತ್ತೀಯ ಎಂದು ನಂಬಿ ಯೇಸು ನಾಮದಲ್ಲಿ ಪಾರ್ಥಿಸುತ್ತೇನೆ. ಆಮೆನ್.